# ವೇದಾಂತ ಸಾಧನೆಯಲ್ಲಿ ಶ್ರದ್ಧೆಯ ಸ್ಥಾನ

ಡಾ. ರೂಪಾ

## ಶ್ರದ್ಧೆ ಎಂದರೇನು?

'ಶ್ರದ್ಧೆ' ಎನ್ನುವುದಕ್ಕೆ 'ನಂಬಿಕೆ', 'ಆಸ್ತಿಕ್ಯಬುದ್ಧಿ', 'ಆದರ', 'ವಿಶ್ವಾಸ', 'ಶಾಂತವಾದ ಚಿತ್ತ', 'ಸಮಾಧಾನವಾದ ಮನಸ್ಸು' ಎಂಬ ಹಲವು ಅರ್ಥಗಳಿವೆ. ತೈತ್ತಿರೀಯ ಉಪನಿಷತ್ತಿನ **'ಶ್ರದ್ಧಯಾ ದೇಯಮ್'**[೧] ಎಂಬ ವಾಕ್ಯಕ್ಕೆ 'ಆದರದಿಂದ ಕೊಡಬೇಕು' ಎಂಬ ಅರ್ಥ. 'ದೇವರಲ್ಲಿ ಶ್ರದ್ಧೆಯಿರಬೇಕು' ಎಂದರೆ 'ದೇವರಲ್ಲಿ ನಂಬಿಕೆಯಿರಬೇಕು, ವಿಶ್ವಾಸ ವಿರಬೇಕು' ಎಂದರ್ಥ. ಇಂಥ ಆಸ್ತಿಕ್ಯಬುದ್ಧಿ ದೃಢವಾಗಿದ್ದಾಗ ಮಾತ್ರ ಮನಸ್ಸು ಸಮಾಧಾನದಿಂದ ಕೂಡಿರುತ್ತದೆ, ಶಾಂತವಾಗಿರುತ್ತದೆ.

ಶ್ರದ್ಧೆ ಅವರವರ ಸ್ವಭಾವಕ್ಕನುಗುಣವಾಗಿರುತ್ತದೆ. **ಯೋ ಯಚ್ಛ್ರದ್ಧಃ ಸ ಏವ ಸಃ**– 'ಯಾವನು ಯಾವುದರಲ್ಲಿ ಶ್ರದ್ಧೆಯುಳ್ಳವನೋ ಅವನ (ವ್ಯಕ್ತಿತ್ವವು) ಆ ಶ್ರದ್ಧೆಯ ಅನುರೂಪವೇ ಆಗಿರುತ್ತದೆ.'[೨]

ಶ್ರದ್ಧೆಯುಳ್ಳವನ ಗುಣಗಳಿಗೆ ತಕ್ಕಂತೆ ಶ್ರದ್ಧೆಯೂ ಮೂರು ವಿಧ ಎಂದು ಶ್ರೀಕೃಷ್ಣನು ಭಗವದ್ಗೀತೆಯಲ್ಲಿ ಹೇಳಿದ್ದಾನೆ. ಶ್ರದ್ಧಾಳುವು ಸತ್ತ್ವಗುಣಪ್ರಧಾನನಾಗಿದ್ದರೆ ಅವನ ಶ್ರದ್ಧೆ ಸಾತ್ತ್ವಿಕ ಶ್ರದ್ಧೆ; ಅವನಲ್ಲಿ ರಜೋಗುಣವು ಪ್ರಧಾನವಾಗಿದ್ದರೆ ಅವನ ಶ್ರದ್ಧೆ ರಾಜಸ ಶ್ರದ್ಧೆ. ಅವನು ತಮೋಗುಣವನ್ನು ಪ್ರಧಾನವಾಗಿ ಹೊಂದಿದವನಾಗಿದ್ದರೆ ಅವನದು ತಾಮಸ ಶ್ರದ್ಧೆ. ದೇವತೆಗಳನ್ನು ಪೂಜಿಸುವವನು ಸಾತ್ತ್ವಿಕ ಶ್ರದ್ಧೆಯುಳ್ಳವನು; ಯಕ್ಷರಾಕ್ಷಸರನ್ನು ಪೂಜಿಸುವವನು ರಾಜಸಿಕ ಶ್ರದ್ಧೆಯುಳ್ಳವನು; ಪ್ರೇತಗಳನ್ನು, ಭೂತಗಳನ್ನು ಪೂಜಿಸುವವನು ತಾಮಸಿಕ ಶ್ರದ್ಧೆಯುಳ್ಳವನು.[೩]

ಇಲ್ಲಿ ಶ್ರೀಕೃಷ್ಣನ ಈ ಉಕ್ತಿಗಳನ್ನು ಸ್ಮರಿಸಬಹುದು–

**ಯೋ ಯೋ ಯಾಂ ಯಾಂ ತನುಂ ಭಕ್ತಃ ಶ್ರದ್ಧಯಾರ್ಚಿತುಮಿಚ್ಛತಿ।**
**ತಸ್ಯ ತಸ್ಯಾಚಲಾಂ ಶ್ರದ್ಧಾಂ ತಾಮೇವ ವಿದಧಾಮ್ಯಹಮ್॥**

ಯಾವನು ಯಾವ ರೂಪವನ್ನು ಭಕ್ತನಾಗಿ ಶ್ರದ್ಧೆಯಿಂದ ಅರ್ಚಿಸಲು ಇಚ್ಛಿಸುತ್ತಾನೋ, ಅವನಿಗೆ ಆಯಾ ರೂಪಕ್ಕೆ ಅಚಲವಾದ ಶ್ರದ್ಧೆಯನ್ನು ನಾನು ಉಂಟುಮಾಡುವೆನು.[೪]

**ಸ ತಯಾ ಶ್ರದ್ಧಯಾ ಯುಕ್ತಸ್ತಸ್ಯಾರಾಧನಮೀಹತೇ।**
**ಲಭತೇ ಚ ತತಃ ಕಾಮಾನ್ ಮಯೈವ ವಿಹಿತಾನ್ ಹಿ ತಾನ್ ॥**

ಅವನು ಆ ಶ್ರದ್ಧೆಯಿಂದ ಕೂಡಿದವನಾಗಿ ಅದರ (ಆ ಮೂರ್ತಿಯ) ಆರಾಧನೆಯನ್ನು (ಮಾಡಲು) ಬಯಸುತ್ತಾನೆ ಮತ್ತು ಅದರಿಂದ (ಆ ದೇವತಾಮೂರ್ತಿಯಿಂದ) ನನ್ನಿಂದಲೇ (ಭಗವಂತನಿಂದಲೇ) ಅನುಗ್ರಹಿಸಲ್ಪಟ್ಟ ಕಾಮನೆಗಳನ್ನು ಪಡೆದುಕೊಳ್ಳುತ್ತಾನೆ.[೫]

ಮಗುವಿನಂತೆ ಸರಳವಾದ ಶ್ರದ್ಧೆ ನಮ್ಮಲ್ಲಿರಬೇಕು ಎಂದು ಶ್ರೀರಾಮಕೃಷ್ಣ ಪರಮಹಂಸರು ಹೇಳುತ್ತಾರೆ. ಮಗುವಿನ ಮನಸ್ಸು ತಿಳಿಯಾಗಿರುತ್ತದೆ; ಗೊಂದಲಮಯವಾಗಿರುವುದಿಲ್ಲ. ಆದ್ದರಿಂದ ಮಗುವಿನಲ್ಲಿ ಸರಳವಾದ ಶ್ರದ್ಧೆಯಿರುತ್ತದೆ. ಅಂತಹ ಸರಳ ಶ್ರದ್ಧೆ ಭಗವತ್ಸಾಕ್ಷಾತ್ಕಾರಕ್ಕೆ ಸಾಧನವಾಗುತ್ತದೆ ಎಂದು ಶ್ರೀರಾಮಕೃಷ್ಣರು ಹೇಳುತ್ತಾರೆ. ಶ್ರೀ ಪುರಂದರದಾಸರು 'ನಂಬಿ ಕೆಟ್ಟವರಿಲ್ಲವೋ ರಂಗಯ್ಯನ' ಎಂದು ಹಾಡಿದ್ದಾರೆ.

## ಎಲ್ಲಿ ಶ್ರದ್ಧೆಯನ್ನು ಇಡಬೇಕು?

ಒಳ್ಳೆಯದನ್ನು ನಂಬಿದರೆ ಒಳ್ಳೆಯ ಫಲ; ಕೆಟ್ಟದ್ದನ್ನು ನಂಬಿದರೆ ಕೆಟ್ಟ ಫಲ. ಆದ್ದರಿಂದಲೇ ನಂಬಿಕೆಯನ್ನು ಎಲ್ಲಿ ಇಡುತ್ತೇವೆ ಎನ್ನುವುದೂ ಅತಿ ಮುಖ್ಯ. ಶ್ರದ್ಧೆಯನ್ನು ಎಲ್ಲಿ ಇಡಬೇಕು ಎಂಬುದಕ್ಕೆ ಮಾರ್ಗದರ್ಶನ ಶ್ರೀಶಂಕರಾಚಾರ್ಯರ ವಿವೇಕಚೂಡಾಮಣಿಯಲ್ಲಿನ ಈ ಶ್ಲೋಕದಲ್ಲಿ ಸಿಗುತ್ತದೆ:

**ಶಾಸ್ತ್ರಸ್ಯ ಗುರುವಾಕ್ಯಸ್ಯ ಸತ್ಯಬುದ್ಧ್ಯವಧಾರಣಮ್ ।**
**ಸಾ ಶ್ರದ್ಧಾ ಕಥಿತಾ ಸದ್ಭಿಃ ಯಯಾ ವಸ್ತೂಪಲಭ್ಯತೇ ॥**

ಶಾಸ್ತ್ರವಾಕ್ಯ ಮತ್ತು ಗುರುವಾಕ್ಯಗಳು ಸತ್ಯ ಎಂಬ ನಿಶ್ಚಯಾತ್ಮಕ ಬುದ್ಧಿಯೇ ಶ್ರದ್ಧೆ ಎಂದು ಸಜ್ಜನರು ಹೇಳುತ್ತಾರೆ. ಶ್ರದ್ಧೆಯಿಂದ ವಸ್ತು (ಪರಬ್ರಹ್ಮ) ಪ್ರಾಪ್ತವಾಗುತ್ತದೆ.[೬]

ಗುರುವಾಕ್ಯ ಮತ್ತು ಶಾಸ್ತ್ರವಾಕ್ಯಗಳು ಅನುಭವದ ಆಧಾರದ ಮೇಲೆ ನಿಂತಿರುವುದರಿಂದ ಅವು ನಿಶ್ಚಿತವಾಗಿಯೂ ಸತ್ಯ ಎಂದು ದೃಢವಾಗಿ ನಂಬಬೇಕು ಎನ್ನುವುದು ಇದರ ತಾತ್ಪರ್ಯ.

## ಶ್ರದ್ಧೆಯ ವಿವಿಧ ಆಯಾಮಗಳು

'ಶ್ರದ್ಧೆ' ಎಂಬುದಕ್ಕೆ 'ನಂಬಿಕೆ' ಎಂದಷ್ಟೇ ಅರ್ಥವಲ್ಲ; ಅದಕ್ಕೆ ಇನ್ನೂ ಹೆಚ್ಚಿನ ಅರ್ಥವಿದೆ. 'ಶ್ರದ್ಧೆ' ಗೆ 'ಆಸಕ್ತಿ' ಎಂಬ ಅರ್ಥವೂ ಇದೆ. ಉದಾಹರಣೆಗೆ 'ಅಧ್ಯಯನದಲ್ಲಿ ಶ್ರದ್ಧೆಯಿರಬೇಕು' ಎಂಬ ವಾಕ್ಯಕ್ಕೆ 'ಅಧ್ಯಯನದಲ್ಲಿ ಆಸಕ್ತಿಯಿರಬೇಕು' ಎಂದರ್ಥ.

'ಶ್ರದ್ಧೆ' ಎಂದರೆ ಕೇವಲ ವಿಚಾರಪೂರ್ವಕವಾದ ವಿಶ್ವಾಸವಲ್ಲ. ಆ ವಿಶ್ವಾಸ ಆಚರಣೆಗೂ ಬರಬೇಕು. ಎಷ್ಟೋ ಬಾರಿ ಕೇವಲ ನಂಬಿಕೆಯಿಂದಾಗಲಿ ಅಥವಾ ವಿಶ್ವಾಸದಿಂದಾಗಲಿ ಪ್ರಯೋಜನವಾಗುವುದಿಲ್ಲ. ಉದಾಹರಣೆಗೆ 'ಸತ್ಯವನ್ನೇ ನುಡಿಯಬೇಕು' ಎಂಬುದು ಶಾಸ್ತ್ರವಾಕ್ಯ. ಇದನ್ನು ಕೇವಲ ನಂಬಿದರೆ ಅಥವಾ ಬುದ್ಧಿಪೂರ್ವಕವಾಗಿ ಚಿಂತಿಸಿ ಒಪ್ಪಿಕೊಂಡರೆ ಸಾಲದು. ಸತ್ಯವಚನವನ್ನು ಜೀವನದಲ್ಲಿ ಅಳವಡಿಸಿಕೊಂಡಾಗ ಮಾತ್ರ ಆ ವಾಕ್ಯದಲ್ಲಿ ನಮಗೆ ಶ್ರದ್ಧೆಯಿದೆ ಎಂಬಂತೆ ಆಗುತ್ತದೆ. ಆಗ ಮಾತ್ರ ಸತ್ಯವಚನದ ಫಲ ಲಭಿಸುತ್ತದೆ.

ಒಟ್ಟಿನಲ್ಲಿ ಶ್ರದ್ಧೆ ಎಂಬ ಪದವು ಈ ಅರ್ಥಗಳನ್ನು ಸೂಚಿಸುತ್ತದೆ: ೧)ನಂಬಿಕೆ ೨) ಆಸಕ್ತಿ ೩) ವಿಮರ್ಶೆ ೪) ಸಂಪೂರ್ಣವಾಗಿ ಒಪ್ಪಿಕೊಳ್ಳುವಿಕೆ ೫) ಅನುಷ್ಠಾನ ೬) ಗೌರವ–ಭಕ್ತಿ. ಈ ಅಂಶಗಳು ನೂರಕ್ಕೆ ನೂರು ಇರಬೇಕು ಎಂಬುದು ಅತಿ ಮುಖ್ಯ. ಇಷ್ಟು ಅಂಶಗಳಿಂದ ಕೂಡಿರುವ ಶ್ರದ್ಧೆ ಜೀವನಕ್ಕೆ ಸಾರ್ಥಕತೆಯನ್ನು ತಂದುಕೊಡುವ ಸಾಧನವಾಗುತ್ತದೆ ; ಮಾನವನ ಉದ್ಧಾರಕ್ಕೆ ಮೂಲ ಕಾರಣವಾಗುತ್ತದೆ. ಹೇಗೆಂದರೆ – ಶಾಸ್ತ್ರವಾಕ್ಯಗಳು, ಗುರುವಾಕ್ಯಗಳು ಮಾನವನ ಉದ್ಧಾರಕ್ಕೆ

ಮಾರ್ಗದರ್ಶಕವಾಗಿರುತ್ತವೆ. ಅವುಗಳಲ್ಲಿ ಶ್ರದ್ಧೆ ಇದ್ದರೆ ಉದ್ಧಾರವಾಗುವುದು ನಿಶ್ಚಿತ. 'ಯಾರು ನನ್ನ ಈ ಅಭಿಪ್ರಾಯವನ್ನು ಶ್ರದ್ಧೆಯಿಂದ ಅನುಷ್ಠಾನ ಮಾಡುತ್ತಾರೋ ಅವರು ಕರ್ಮಬಂಧದಿಂದ ಮುಕ್ತರಾಗುತ್ತಾರೆ' ಎಂದು ಶ್ರೀಕೃಷ್ಣನು ಭಗವದ್ಗೀತೆಯಲ್ಲಿ ಹೇಳುತ್ತಾನೆ.[7]

### ಜ್ಞಾನಸಾಧನವಾಗಿ ಶ್ರದ್ಧೆ

ಶ್ರದ್ಧೆ ಜ್ಞಾನಕ್ಕೆ ಸಾಧನ. 'ಜ್ಞಾನ' ಎಂಬುದಕ್ಕೆ ವಿಶಾಲವಾದ ಅರ್ಥದಲ್ಲಿ 'ತಿಳಿವಳಿಕೆ' ಎಂದರ್ಥ, ಸ್ಥೂಲವಾದ ಅರ್ಥದಲ್ಲಿ ಲೌಕಿಕ ಜ್ಞಾನ, ಪಾರಲೌಕಿಕ ಜ್ಞಾನ ಎಲ್ಲವೂ ಅದರಲ್ಲೇ ಸೇರುತ್ತವೆ. ಈ ಎರಡರಲ್ಲಿ ಯಾವುದನ್ನು ಪಡೆಯಬೇಕಾದರೂ ಶ್ರದ್ಧೆ ಬೇಕು. ಅದರಲ್ಲೂ ಪಾರಲೌಕಿಕ ಜ್ಞಾನವನ್ನು ಪಡೆಯಲು ಶ್ರದ್ಧೆ ಬೇಕೇ ಬೇಕು.

'ಜ್ಞಾನ' ಎಂಬುದಕ್ಕೆ ಅಧ್ಯಾತ್ಮವಿದ್ಯೆ, ಆತ್ಮಜ್ಞಾನ, ಬ್ರಹ್ಮಜ್ಞಾನ ಎಂಬ ಉನ್ನತವಾದ ಅರ್ಥಗಳಿವೆ. ಇದೇ ಆತ್ಯಂತಿಕಸುಖಕ್ಕೆ ಮತ್ತು ಮುಕ್ತಿಗೆ ಕಾರಣ. 'ಮುಕ್ತಿ' ಎಂದರೆ ಮನಸ್ಸಿನಲ್ಲಿ ಯಾವ ಬಂಧನವೂ ಇಲ್ಲದ ಸ್ಥಿತಿ; ಜನ್ಮ–ಮರಣ ಬಂಧನವಿಲ್ಲದ ಸ್ಥಿತಿ. ಇಂತಹ ಮುಕ್ತಿಗೆ ಜ್ಞಾನ ಸಾಧನವಾದುದರಿಂದ, **ನ ಹಿ ಜ್ಞಾನೇನ ಸದೃಶಂ ಪವಿತ್ರಮಿಹ ವಿದ್ಯತೇ** – ಜ್ಞಾನಕ್ಕೆ ಸಮವಾಗಿ ಪವಿತ್ರವಾದುದು ಇನ್ನೊಂದಿಲ್ಲ.[8] **ಶ್ರದ್ಧಾವಾನ್ ಲಭತೇ ಜ್ಞಾನಮ್**–ಇಂತಹ ಜ್ಞಾನ ಸಿಗುವುದು ಶ್ರದ್ಧೆಯಿಂದ. ಶ್ರದ್ಧೆಯುಳ್ಳವನು ಜ್ಞಾನವನ್ನು ಪಡೆಯುತ್ತಾನೆ ಎಂದು ಶ್ರೀಕೃಷ್ಣ ಹೇಳಿದ್ದಾನೆ.[9] ಒಟ್ಟಿನಲ್ಲಿ, **ಶ್ರದ್ಧೆಯಿಂದ ಜ್ಞಾನ, ಜ್ಞಾನದಿಂದ ಮುಕ್ತಿ.**

ಶ್ರದ್ಧೆ ಜ್ಞಾನಕ್ಕೆ, ತನ್ಮೂಲಕ ಮುಕ್ತಿಗೆ ಸಾಧನವಾದರೆ, ಅಶ್ರದ್ಧೆ ಬಂಧನಕ್ಕೆ ಕಾರಣವಾಗುತ್ತದೆ. 'ಶ್ರದ್ಧೆಯಿಲ್ಲದವನು ಮೃತ್ಯುಸಂಸಾರ ಮಾರ್ಗಕ್ಕೆ ಹಿಂದಿರುಗುತ್ತಾನೆ'. ಎಂದು ಹೇಳುವ ಭಗವದ್ಗೀತೆಯ ಶ್ಲೋಕವು[10] ಇದನ್ನೇ ಸಮರ್ಥಿಸುತ್ತದೆ. **ಸಂಶಯಾತ್ಮಾ ವಿನಶ್ಯತಿ** – 'ಶ್ರದ್ಧೆಯಿಲ್ಲದ ಸಂಶಯವುಳ್ಳವನು ನಾಶ ಹೊಂದುತ್ತಾನೆ'[11] ಎಂದು ಶ್ರೀಕೃಷ್ಣನೇ ಇನ್ನೊಂದೆಡೆ ಸ್ಪಷ್ಟವಾಗಿ ಹೇಳಿದ್ದಾನೆ.

ಈ ಸಂಶಯವನ್ನು ಹೇಗೆ ಹೋಗಲಾಡಿಸಿಕೊಳ್ಳಬೇಕು? ಈ ಬಗ್ಗೆ ಕೂಡ ಶ್ರೀಕೃಷ್ಣನೇ ಹೀಗೆ ಉಪದೇಶ ಮಾಡುತ್ತಾನೆ: 'ಅಜ್ಞಾನ ಸಂಭೂತವಾದ ಸಂಶಯವನ್ನು ಜ್ಞಾನವೆಂಬ ಕತ್ತಿಯಿಂದ ನಾಶ ಮಾಡಬೇಕು.'[12] ಇದರರ್ಥ, ಸರಿಯಾಗಿ ವಿಚಾರ ಮಾಡುವುದರ ಮೂಲಕ ಸಂಶಯವನ್ನು ಹೋಗಲಾಡಿಸಿಕೊಳ್ಳಬೇಕು ಎಂದು. ಆಗ ಶ್ರದ್ಧೆ ಉಂಟಾಗುತ್ತದೆ. ಶ್ರದ್ಧೆಯಿಂದ ಜ್ಞಾನ ಪ್ರಾಪ್ತವಾಗುತ್ತದೆ. ಜ್ಞಾನದಿಂದ ಆತ್ಯಂತಿಕಸುಖ ಲಭಿಸುತ್ತದೆ.

ವೇದಾಂತದ ಈ ತತ್ತ್ವದ ಜ್ಞಾನ ಅನುಭವಕ್ಕೆ ಬರಬೇಕಾದರೆ ಶ್ರದ್ಧೆ ಅನಿವಾರ್ಯ. ಆದ್ದರಿಂದಲೇ ಶ್ರೀಶಂಕರಾಚಾರ್ಯರು **'ಯಯಾ ವಸ್ತೂಪಲಭ್ಯತೇ'** – ಯಾವುದರಿಂದ ಭಗವತ್ಪ್ರಾಪ್ತಿ, ಮುಕ್ತಿಪ್ರಾಪ್ತಿಯಾಗುತ್ತದೋ ಅದು ಶ್ರದ್ಧೆ[13] ಎಂದು ಹೇಳಿದ್ದಾರೆ.

'ಶ್ರದ್ಧೆ ಬ್ರಹ್ಮವಿದ್ಯೆಗೆ ಸಾಧನ' ಎಂಬುದನ್ನು ಕೈವಲ್ಯೋಪನಿಷತ್ತಿನಲ್ಲಿ ಹೀಗೆ ಹೇಳಿದೆ: ಆಶ್ವಲಾಯನ ಋಷಿಗಳು ಬ್ರಹ್ಮದೇವನ ಬಳಿ ಹೋಗಿ "ಭಗವಂತನೇ, ಶ್ರೇಷ್ಠವೂ ಯಾವಾಗಲೂ ಸತ್ಪುರುಷರಿಂದ ಸೇವಿಸಲ್ಪಡುವುದೂ ನಿಗೂಢವೂ ಆಗಿರುವ, ಯಾವುದರಿಂದ ಜ್ಞಾನಿಯು ಬೇಗನೆ ಸಮಸ್ತ ಪಾಪಗಳನ್ನು ಕಳೆದುಕೊಂಡು ಪರಾತ್ಪರನಾದ ಪುರುಷನನ್ನು (ಪರಬ್ರಹ್ಮನನ್ನು) ಹೊಂದುವನೋ, ಅಂತಹ ಬ್ರಹ್ಮವಿದ್ಯೆಯನ್ನು ನನಗೆ ಉಪದೇಶ ಮಾಡು" ಎಂದು ಕೇಳಿಕೊಂಡರು. ಆಗ ಬ್ರಹ್ಮದೇವನು, **ಸ ಹೋವಾಚ ಪಿತಾಮಹಶ್ಚ ಶ್ರದ್ಧಾಭಕ್ತಿಧ್ಯಾನಯೋಗಾದ್ ಅವೇಹಿ**– "ಆ ಬ್ರಹ್ಮವಿದ್ಯೆಯನ್ನು ನೀನು ಶ್ರದ್ಧಾ–ಭಕ್ತಿ–ಧ್ಯಾನಯೋಗಗಳಿಂದ ತಿಳಿದುಕೋ" ಎಂದು ಆ ಋಷಿಗೆ ಹೇಳಿದನು.[14] ಶ್ರೀಶಂಕರಾಚಾರ್ಯರು ವಿವೇಕಚೂಡಾಮಣಿಯಲ್ಲಿ ಹೇಳಿರುವುದೂ ಇದನ್ನೇ.

ಶ್ರದ್ಧಾಭಕ್ತಿಧ್ಯಾನಯೋಗಾನ್ ಮುಮುಕ್ಷೋ–
ರ್ಮುಕ್ತೇರ್ಹೇತೂನ್ ವಕ್ತಿ ಸಾಕ್ಷಾಚ್ಛ್ರುತೇರ್ಗೀಃ ।
ಯೋ ವಾ ಏತೇಷ್ವೇವ ತಿಷ್ಠತ್ಯಮುಷ್ಯ
ಮೋಕ್ಷೋಽವಿದ್ಯಾಕಲ್ಪಿತಾದ್ ದೇಹಬಂಧಾತ್ ॥

ಶ್ರದ್ಧೆ, ಭಕ್ತಿ, ಧ್ಯಾನಯೋಗ–ಇವು ಮುಮುಕ್ಷುವಿನ ಮುಕ್ತಿಗೆ ಕಾರಣವೆಂದು ಶ್ರುತಿವಾಕ್ಯವೇ ನೇರವಾಗಿ ಹೇಳುತ್ತಿದೆ. ಯಾವನು ಇವುಗಳಲ್ಲಿಯೇ ನೆಲಗೊಂಡಿರುವನೋ ಅವನಿಗೆ ಅವಿದ್ಯೆಯಿಂದ ಕಲ್ಪಿತವಾದ ದೇಹಬಂಧದಿಂದ ಬಿಡುಗಡೆಯಾಗುತ್ತದೆ.[15]

ಒಟ್ಟಿನಲ್ಲಿ ಶ್ರದ್ಧೆಯ ಬಗ್ಗೆ ಹೀಗೆ ಹೇಳಬಹುದು:

**ಸಮತ್ವದರ್ಶನಂ ಜ್ಞಾನಂ ಜ್ಞಾನಂ ಮೋಕ್ಷಸ್ಯ ಸಾಧನಮ್ ।**
**ಆಸ್ತಿಕ್ಯಬುದ್ಧಿರ್ಹಿ ಶ್ರದ್ಧಾ ಸತ್ಯಮಿತ್ಯೇವ ನಿಶ್ಚಯಾ ॥೧॥**
**ವಿಚಾರಪೂರ್ವಿಕಾ ಸಾ ಸ್ಯಾತ್ ನೈವಾವಿಚಾರಪೂರ್ವಿಕಾ ।**
**ವಿಶ್ವಸ್ತಸ್ಯಾಚರಣಾ ಸಾ ಭಕ್ತ್ಯಾದರಸಮನ್ವಿತಾ ॥೨॥**
**ಶ್ರದ್ಧಯಾ ಲಭ್ಯತೇ ಜ್ಞಾನಂ ಜ್ಞಾನೇನಾಜ್ಞಾನನಾಶನಮ್ ।**
**ತಸ್ಮಾತ್ಸರ್ವಸ್ಯ ಬಂಧಸ್ಯ ನಾಶೋಽಽತ್ಯಂತಿಕಂ ಸುಖಮ್ ॥೩॥**

ಸಮತ್ವದರ್ಶನವು ಜ್ಞಾನ. ಜ್ಞಾನವು ಮೋಕ್ಷಕ್ಕೆ ಸಾಧನ. (ಶಾಸ್ತ್ರವಾಕ್ಯ, ಗುರುವಾಕ್ಯ, ಆಪ್ತವಾಕ್ಯಗಳು) ಸತ್ಯವೇ ಎಂಬ ನಿಶ್ಚಯವಾದ ಆಸ್ತಿಕ್ಯಬುದ್ಧಿಯೇ ಶ್ರದ್ಧೆ. ಆ ಶ್ರದ್ಧೆ ವಿಚಾರಪೂರ್ವಕವಾಗಿರಬೇಕು. ಅವಿಚಾರ ಪೂರ್ವಕವಾಗಿ ಇರಲೇಬಾರದು. ಅದು ನಂಬಿದುದನ್ನು ಆಚರಣೆಗೆ ತರುವುದಾಗಿರಬೇಕು, ಭಕ್ತಿ–ಆದರಗಳಿಂದ ಕೂಡಿದ್ದಾಗಿರಬೇಕು. ಇಂತಹ ಶ್ರದ್ಧೆಯಿಂದ ಜ್ಞಾನ ಲಭಿಸುತ್ತದೆ. ಜ್ಞಾನದಿಂದ ಅಜ್ಞಾನ ನಾಶವಾಗುತ್ತದೆ. ಇದರಿಂದ ಎಲ್ಲ ಬಂಧಗಳೂ ನಾಶವಾಗಿ ಆತ್ಯಂತಿಕ ಸುಖವು ಲಭಿಸುತ್ತದೆ.[16]

ಆಕರಗಳು:

೧. ತೈತ್ತಿರೀಯೋಪನಿಷತ್, ೧.೧೧
೨. ಭಗವದ್ಗೀತೆ, ೧೭.೩
೩. ಭಗವದ್ಗೀತೆ, ೧೭.೪
೪. ಭಗವದ್ಗೀತೆ, ೮.೨೧
೫. ಭಗವದ್ಗೀತೆ, ೧೭.೪
೬. ವಿವೇಕಚೂಡಾಮಣಿ, ೨೫
೭. ಭಗವದ್ಗೀತೆ, ೩.೩೧
೮. ಭಗವದ್ಗೀತೆ, ೪.೩೮
೯. ಭಗವದ್ಗೀತೆ,೪.೩೯
೧೦.ಭಗವದ್ಗೀತೆ, ೯.೩
೧೧.ಭಗವದ್ಗೀತೆ,.೪.೪೦
೧೨.ಭಗವದ್ಗೀತೆ,೪.೪೨
೧೩.ವಿವೇಕಚೂಡಾಮಣಿ, ೨೬
೧೪.ಕೈವಲ್ಯೋಪನಿಷತ್.
೧೫.ವಿವೇಕಚೂಡಾಮಣಿ, ೧೪೬
೧೬. ಸ್ವ–ರಚನೆ